## ಜನಪದ ಸೊಗಸು

ಚಂದನದ 'ಗಾನಗರಡಿ' ಕಾರ್ಯಕ್ರಮವು ಚೆನ್ನಾಗಿ ಮೂಡಿಬರುತ್ತಿದೆ. ನಿರೂಪಕ ಕಡಬಗೆರೆ ಮುನಿರಾಜು ಅವರ ಮಾತು ಕೇಳಲು ಖುಷಿ ಆಗುತ್ತದೆ. ಜನಪದ ಗೀತೆಗಳಿಗೆ ಇಲ್ಲಿ ಅವಕಾಶ ನೀಡಿದ್ದರಿಂದ ಕೇಳಲೂ ಸೊಗಸು.

—ಅಂಬಿಕಾ ಚಂದ್ರಕಾಂತ ಭಟ್ಟ, ಸುಗಾವಿ

## ಈ ಟೀಕೆ ಎಷ್ಟು ಸರಿ?

ನಟ ದರ್ಶನ್ ಮಧ್ಯಂತರ ಜಾಮೀನು ಸಿಕ್ಕ ವಿಚಾರವನ್ನು ನ್ಯೂಸ್ ವಾಹಿನಿಯೊಂದು 'ದರ್ಶನ್‌ಗೆ ಸಿಕ್ಕಿರುವುದು ಕೇವಲ ಆರು ವಾರಗಳ ಬಿಡುಗಡೆ ಭಾಗ್ಯ. ನಂತರ ಜೈಲಲ್ಲಿ ಸೊಳ್ಳೆಗಳಿಂದ ಕಚ್ಚಿಸಿಕೊಳ್ಳಬೇಕು. ತಿಗಣೆಗಳಿಂದ ರಕ್ತ ಹೀರಿಸಿಕೊಳ್ಳಬೇಕು' ಎಂದು ಜೈಲ್ ವಾತಾವರಣವನ್ನು ಹೀಯಾಳಿಸಿತು. ಇದು ಎಷ್ಟು ಸರಿ? ಕರ್ನಾಟಕದ ಜೈಲುಗಳ ಸ್ಥಿತಿ ಅಷ್ಟೊಂದು ಹೀನಾಯವಾಗಿ ಇದ್ದರೆ ಆದಷ್ಟು ಬೇಗ ಸುಧಾರಣೆಯಾಗಲಿ. ಇಂತಹ ಅತಿರೇಕಗಳಿಗೆ ಕಡಿವಾಣ ಹಾಕಬೇಕಿದೆ. ಜೈಲು ಕೇವಲ ಶಿಕ್ಷೆಯ ಕೇಂದ್ರವಲ್ಲ.

—ಮಲ್ಲಿಕಾರ್ಜುನ ಸುರಧೇನುಪುರ

## 'ಬೊಂಬಾಟ್ ಭೋಜನ'ದಲ್ಲಿ ಕನ್ನಡವೇ ಇಲ್ಲ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ'ದಲ್ಲಿ ಅಡುಗೆ ತಯಾರಿಸುವ ಅತಿಥಿಗಳು ತಮಗೆ ಬೇಕಾದ ಪದಾರ್ಥಗಳ ಹೆಸರನ್ನು ಕನ್ನಡದಲ್ಲಿ ಹೇಳದೆ ಇರುವುದು ಕಿರಿಕಿರಿ ಅನ್ನಿಸಿತು.

ಸಕ್ಕರೆ ಪುಡಿಗೆ ಶುಗರ್ ಪೌಡರ್, ಏಲಕ್ಕಿಗೆ ಇಲಾಚಿ, ತಣ್ಣಗಿಡಲು, ಕೂಲ್ ಆಗಲು ಬಿಡಿ ಹೀಗೆ ಅನ್ಯ ಭಾಷೆಯ ಪದಗಳನ್ನೇ ಹೆಚ್ಚು ಬಳಸುತ್ತಾರೆ. ಇದು ಕನ್ನಡ ವಾಹಿನಿ ಅಲ್ಲವೇ? ನಿರೂಪಕ ಸಿಹಿಕಹಿ ಚಂದ್ರು ಅವರು ಕನ್ನಡ ಗೊತ್ತಿರುವವರಿಗೆ ಮಾತ್ರ ಅವಕಾಶ ಕೊಡುವ ಬಗ್ಗೆ ಎಚ್ಚರವಹಿಸುವುದು ಒಳಿತು.

— ಕೆ.ಎಸ್. ಸವಿತಾ, ಬೆಂಗಳೂರು

ವಾರದ ಪತ್ರ

## ಕಳೆಗುಂದಿದ ನಾರಾಯಣ ಆಚಾರ್ಯ

ಕಲರ್ಸ್ ಕನ್ನಡದ 'ರಾಮಾಚಾರಿ'ಯಲ್ಲಿ ರಾಮಾಚಾರಿಯ ತಂದೆ ನಾರಾಯಣ ಆಚಾರ್ಯ ಪಾತ್ರವನ್ನು ತುಂಬಾ ಸುಂದರವಾಗಿ ಚಿತ್ರಿಸಲಾಗಿತ್ತು.

ಆತ ತುಂಬ ಶಿಸ್ತಿನ ಮನುಷ್ಯ, ಆಚಾರವಂತ, ಕುಟುಂಬವನ್ನು ತನ್ನ ಹದ್ದುಬಸ್ತಿನಲ್ಲಿ ಇಟ್ಟುಕೊಂಡಿದ್ದ ಜವಾಬ್ದಾರಿಯುತ ಯಜಮಾನನಂತೆ ತೋರಿಸಿದ್ದರು. ಈಗ ಒಬ್ಬ ಹೇಡಿಯಂತೆ, ಜವಾಬ್ದಾರಿಯಿಂದ ನುಣುಚಿಕೊಳ್ಳುವ ದುರ್ಬಲ ಮನಸ್ಸಿನ ವ್ಯಕ್ತಿಯಂತೆ ತೋರಿಸಲಾಗಿದೆ.

ವೈಶಾಖಾಳಿಂದ ತನ್ನ ಕುಟುಂಬವೇ ಸರ್ವನಾಶವಾಗಲಿದೆ ಎಂದು ತಿಳಿದಿದ್ದರೂ ಸತ್ಯವನ್ನು ಬಾಯಿಬಿಡದೆ ಇರುವುದು ತುಂಬಾ ವಿಚಿತ್ರವೆನಿಸುತ್ತದೆ. ಸತ್ಯಭಾಮಾಳಿಗೂ ತನಗೂ ಯಾವ ಸಂಬಂಧ ಇಲ್ಲ ಎಂದು ತಿಳಿದಿದ್ದರೂ ಅದನ್ನು ಮುಚ್ಚಿಟ್ಟು ವೈಶಾಖಾಳ ಬ್ಲಾಕ್‌ಮೇಲ್‌ಗೆ ಬಲಿಯಾಗುವುದೇಕೊ ತಿಳಿಯದು. ಧಾರಾವಾಹಿಯನ್ನು ಎಳೆಯುವುದಕ್ಕಾಗಿ ಸತ್ಯಭಾಮಾಳ ಬಗ್ಗೆ ಸೃಷ್ಟಿಸಿದ ಸಸ್ಪೆನ್ಸ್ ಕೊನೆಗೂ ಠುಸ್ ಅಂದಿದೆ.

—ಮುರಳೀಧರ ಕುಲಕರ್ಣಿ, ಬೀದರ್

## ಸ್ನೇಹ ಅಂತ್ಯ!

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಉತ್ತಮವಾಗಿ ಮೂಡಿಬರುತ್ತಿದೆ. ಪುಟ್ಟಕ್ಕನ ಮಗಳು ಸ್ನೇಹ ಪಾತ್ರವನ್ನು ಅಂತ್ಯಗೊಳಿಸಿದ್ದಕ್ಕೆ ವಿಷಾದವಾಗುತ್ತದೆ. ಈ ಧಾರಾವಾಹಿಯಲ್ಲಿ 'ಸತ್ತ ಮೇಲೂ ಬದುಕಬೇಕೆಂದರೆ ಅಂಗಾಂಗ ದಾನ ಮಾಡಿ' ಎಂಬ ಸಂದೇಶ ನೀಡಿದ್ದಕ್ಕೆ ಅಭಿನಂದನೆಗಳು.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ






## ಸ್ಟಾರ್ ಸುವರ್ಣೋತ್ಸವ

ಟೀವಿ ವಾಹಿನಿಗಳು ವೀಕ್ಷಕರನ್ನು ಸೆಳೆಯಲು ಹೊಸ ತಂತ್ರಗಳನ್ನು ಬಳಸುತ್ತಿವೆ. ಅದರಲ್ಲಿ ಧಾರಾವಾಹಿ ಆರಂಭದಲ್ಲಿ ನಡೆಸುವ ರಸಪ್ರಶ್ನೆ ಸ್ಪರ್ಧೆ ಕೂಡ ಒಂದು. ಅಲ್ಲಿ ಕೇಳುವ ಪ್ರಶ್ನೆಗಳಿಗೆ ಬಹು ಆಯ್ಕೆಯ ಉತ್ತರಗಳಲ್ಲಿ ಸರಿ ಉತ್ತರ ನೀಡಿದ ಅದೃಷ್ಟಶಾಲಿಗಳಿಗೆ ಬಹುಮಾನ ನೀಡುತ್ತಿದ್ದಾರೆ.

ದಾವಣಗೆರೆಯಲ್ಲಿ ಸ್ಟಾರ್ ಸುವರ್ಣ 'ಸುವರ್ಣೋತ್ಸವ' ಕಾರ್ಯಕ್ರಮವನ್ನು ಏರ್ಪಡಿಸಿದೆ. ತನ್ನ ವೀಕ್ಷಕ ವಲಯವನ್ನು ವಿಸ್ತರಿಸಲು ಟೀವಿ ಮಾಡಿದ ಯೋಜನೆಗಳಲ್ಲಿ ಇದೂ ಒಂದು.

—ಅನುರಾಧ ಟಿ., ದಾವಣಗೆರೆ

## ಚಂದನದ ಸಂಚಾರಿ ಸಾಹಿತ್ಯೋತ್ಸವ

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಚಂದನ ವಾಹಿನಿ 'ಥಟ್ ಅಂತ ಹೇಳಿ'ಯನ್ನು ರಾಷ್ಟ್ರೋತ್ಥಾನ ಪರಿಷತ್ತಿನ ಕೇಶವ ಕೃಪಾ ಸಭಾಂಗಣದಲ್ಲಿ ಏರ್ಪಡಿಸಿತ್ತು. ಕಾರ್ಯಕ್ರಮದಲ್ಲಿ ಪುಸ್ತಕ ಪ್ರದರ್ಶನದ ಜೊತೆ ನಿರೂಪಕ ನಾ. ಸೋಮೇಶ್ವರ ಅವರು ಕನ್ನಡ ನಾಡಿನ ಅನನ್ಯತೆ, ಸಾಹಿತ್ಯ, ಕವಿಗಳು, ಶಿಲ್ಪಕಲೆ, ರಾಜಮನೆತನದ ಬಗ್ಗೆ ಚರ್ಚಿಸಿದ್ದು ರಾಜ್ಯೋತ್ಸವದ ಹಿರಿಮೆಗೆ ತಕ್ಕುದಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

## ಈಗ ಹೆಲ್ಮೆಟ್ ರಹಿತ ಚಾಲನೆ ನಿಷಿದ್ಧ!

ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 129ರ ಪ್ರಕಾರ, ಹೆಲ್ಮೆಟ್ ಇಲ್ಲದೆ ದ್ವಿಚಕ್ರ ವಾಹನವನ್ನು ಚಾಲನೆ ಮಾಡುವುದು ಸಂಚಾರ ನಿಯಮ ಉಲ್ಲಂಘನೆ. ಅದನ್ನು ಧಾರಾವಾಹಿಗಳಲ್ಲಿ ದ್ವಿಚಕ್ರ ವಾಹನ ಸವಾರಿ ಮಾಡುವ ದೃಶ್ಯ ಬಂದಾಗ ಪರದೆಯ ಮೇಲೆ 'ಹೆಲ್ಮೆಟ್ ರಹಿತ ಸವಾರಿ ಅಪಾಯಕಾರಿ ಹಾಗೂ ಕಾನೂನು ಬಾಹಿರ' ಎಂಬ ಬರಹವನ್ನು ಟೀವಿ ಪರದೆ ಮೇಲೆ ತೋರಿಸುತ್ತಿದ್ದರು.

ಆದರೆ, ಕಲರ್ಸ್ ಕನ್ನಡದ 'ಸೀತಾರಾಮ'ದ ಒಂದು ಕಂತಿನಲ್ಲಿ ದ್ವಿಚಕ್ರ ವಾಹನದಲ್ಲಿ ಮಹಿಳೆ ಹೆಲ್ಮೆಟ್ ಇಲ್ಲದೆ ಪ್ರಯಾಣಿಸಿದ ದೃಶ್ಯ ಪ್ರಸಾರವಾಗಿದ್ದನ್ನು ಗಮನಿಸಿ ವೀಕ್ಷಕರೊಬ್ಬರು ದೂರಿದ್ದರು.

ನಂತರದ ದಿನಗಳಲ್ಲಿ 'ಭಾಗ್ಯಲಕ್ಷ್ಮೀ', 'ನಿನಗಾಗಿ' ಧಾರಾವಾಹಿಗಳಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡುವ ದೃಶ್ಯಗಳಲ್ಲಿ ಹೆಲ್ಮೆಟ್ ರಹಿತ ಚಾಲನೆ ಅಪಾಯಕಾರಿ ಹಾಗೂ ಕಾನೂನುಬಾಹಿರ ಎಂಬ ಸೂಚನೆ ಹಾಕುವುದು ಬಿಟ್ಟಿದ್ದಾರೆ. ವಾಹನ ಸವಾರರಿಗೆ ಹೆಲ್ಮೆಟ್ ಹಾಕಿ ಸವಾರಿ ಮಾಡುವ ದೃಶ್ಯ ಚಿತ್ರೀಕರಣ ಮಾಡುತ್ತಿರುವುದು ಗಮನಿಸಿ ಖುಷಿ ಆಯ್ತು.

—ರಘುನಾಥರಾವ್ ತಾಪ್ಸೆ, ದಾವಣಗೆರೆ